# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 316 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿ |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆಗಾಗಿ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; ಅವುಗಳಲ್ಲಿ ಎಷ್ಟು ಅರ್ಜಿಗಳನ್ನು ಅನುಮೋದಿಸಲಾಗಿದೆ; ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಹಾಗೂ ಎಷ್ಟು ಅರ್ಜಿಗಳು ಬಾಕಿ ಇವೆ; (ತಾಲ್ಲೂಕುವಾರು ವಿವರ ನೀಡುವುದು); | ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆಗಾಗಿ ಸಲ್ಲಿಕೆಯಾಗಿರುವ, ಅನುಮೋದಿತ, ತಿರಸ್ಕೃತ ಮತ್ತು ಬಾಕಿ ಇರುವ ಅರ್ಜಿಗಳ ತಾಲ್ಲೂಕುವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಆ) | ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆ ಅರ್ಜಿಗಳ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು; ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆ ಅರ್ಜಿಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬವಾಗದೆ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲಾಗುತ್ತಿದೆ.<br><br>ಈ ಕುರಿತು ಸರ್ಕಾರವು ಕೈಗೊಂಡ ಕ್ರಮದ ವಿವರವನ್ನು ಉಪ ಪ್ರಶ್ನೆ (ಈ)ಯಲ್ಲಿ ತಿಳಿಸಲಾಗಿದೆ. |
| (ಇ) | ಸಿ ಮತ್ತು ಡಿ ವರ್ಗದ ಭೂಮಿಗಳಿಗೆ ಭೂ ಪರಿವರ್ತನೆಗೆ ಅನುಮತಿ ನೀಡುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು; | ಸಿ ಮತ್ತು ಡಿ ವರ್ಗದ ಜಮೀನುಗಳ ಮಂಜೂರಾತಿಗೆ ಸಂಬಂಧಿಸಿದಂತೆ ಬಗರ್ ಹುಕುಂ ಸಕ್ರಮೀಕರಣ ಸಮಿತಿ ಹಾಗೂ ಇತರೆ ಮಂಜೂರಾತಿ ನಿಯಮಗಳನ್ವಯ ಸದರಿ ಜಮೀನುಗಳು ಖಾತೆ ಹಾಗೂ ಪೋಡಿ ದುರಸ್ತಿಯಾದ ಪ್ರಕರಣಗಳಲ್ಲಿ ಸರ್ಕಾರವು ವಿಧಿಸಿರುವ ಪರಭಾರೆ ನಿರ್ಬಂಧ ಅವಧಿ ಪೂರ್ಣಗೊಂಡ ಜಮೀನುಗಳಿಗೆ ಭೂ ಪರಿವರ್ತನೆ ಮಾಡಲು ಅವಕಾಶವಿರುತ್ತದೆ. |
| (ಈ) | ಕೊಡಗು ಜಿಲ್ಲೆಯ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಸರಳೀಕರಿಸಿ ಆನ್‌ಲೈನ್ ಮೂಲಕ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದಿಂದ ಯಾವ ಹೊಸ ಕ್ರಮಗಳನ್ನು ಕೈಗೊಳ್ಳಲಾಗಿವೆ? | ರಾಜ್ಯಾದ್ಯಂತ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವ ಪ್ರಕ್ರಿಯೆಯನ್ನು ಸರಳೀಕರಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ಕ್ಕೆ ತಿದ್ದುಪಡಿ ಮಾಡಲಾಗಿರುತ್ತದೆ. ಅದಕ್ಕೆ ಅನುಗುಣವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 106ರಲ್ಲಿ ನಿಯಮಗಳನ್ನು ರಚಿಸಲಾಗಿದೆ.<br><br>ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ106(ಸಿ) ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಯಮ, 1961ರ 13(4)ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ |

ಮಹಾ ಯೋಜನೆಯಲ್ಲಿರುವ ಪ್ರದೇಶದೊಳಗೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ರನ್ವಯ ಪರಿವರ್ತಿಸಲು ಜಿಲ್ಲಾಧಿಕಾರಿಯಿಂದ ಯಾವುದೇ ಪೂರ್ವಾನುಮತಿ ಪಡೆಯುವ ಅಗತ್ಯವಿರುವುದಿಲ್ಲ.

ಅರ್ಜಿದಾರನು, ನಮೂನೆ-21ಬಿ ರಲ್ಲಿ ಅಫಿಡವಿಟ್ ಜೊತೆಗೆ ಅಧಿಕಾರವ್ಯಾಪ್ತಿಯುಳ್ಳ ಯೋಜನಾ ಪ್ರಾಧಿಕಾರಕ್ಕೆ ಜಮೀನಿನ ಅಥವಾ ಜಮೀನಿನ ಭಾಗ ಮಾತ್ರ ಪರಿವರ್ತನೆ ಕೋರಿದಲ್ಲಿ ಅನ್ವಯವಾಗುವ 11ಇ ನಕಾಶೆಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿದಾರನು ಅನ್ವಯಿಸುವ ಶುಲ್ಕವನ್ನು ಸಂಬಂಧಪಟ್ಟ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಿದ ನಂತರ ಅರ್ಜಿದಾರನಿಗೆ "ಡಿಜಿಟಲ್ ಪಾವತಿ ರಸೀದಿ" ವಿತರಣೆಯಾಗುತ್ತದೆ ಹಾಗೂ ಒಂದು ಪ್ರತಿ ಜಿಲ್ಲಾಧಿಕಾರಿಯವರಿಗೆ ಕಂದಾಯ ದಾಖಲೆ ಇಂದೀಕರಣಕ್ಕಾಗಿ ರವಾನೆಯಾಗುತ್ತದೆ.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 106(ಡಿ)ರಂತೆ ಮಹಾ ಯೋಜನೆಯ ವ್ಯಾಪ್ತಿಯ ಹೊರಗೆ ಇರುವ ಜಮೀನುಗಳಿಗೆ ಸಂಬಂಧಿಸಿದಂತೆ ಅರ್ಜಿದಾರನು ಆನ್‌ಲೈನ್ ಮೂಲಕ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿದ ಅರ್ಜಿ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಜಿಲ್ಲಾಧಿಕಾರಿಯವರು ಈ ಕೆಳಕಂಡ ಪ್ರಾಧಿಕಾರಗಳಿಂದ ಪರಿಶೀಲನಾ ವರದಿಗಳನ್ನು ಪಡೆದುಕೊಂಡು ಕ್ರಮ ಜರುಗಿಸುತ್ತಾರೆ.

1 ಅಧಿಕಾರವ್ಯಾಪ್ತಿಯ ನಗರ ಯೋಜನಾ ಪ್ರಾಧಿಕಾರ.

2.ಅಧಿಕಾರವ್ಯಾಪ್ತಿಯುಳ್ಳ ತಹಶೀಲ್ದಾರ್‌ನ ಸ್ಥಳ ಪರಿಶೀಲನೆ, ಸರ್ವೆ ನಕ್ಷೆ ಮತ್ತು ಅಭಿಪ್ರಾಯ ಹಾಗೂ ಪರಿಶೀಲನಾ ವರದಿಗಳನ್ನು ಮತ್ತು ಉಪವಿಭಾಗಾಧಿಕಾರಿಗಳು ಭೂ ಸ್ವಾಧೀನತೆ ಮತ್ತು ಭೂಮಿಗೆ ಸಂಬಂಧಿತ ಪಿಟಿಸಿಎಲ್ ಬಗ್ಗೆ ಅಭಿಪ್ರಾಯವನ್ನು ಸಲ್ಲಿಸತಕ್ಕ ಪ್ರಾಧಿಕಾರ

3.ಹಾಗೂ ಅಗತ್ಯವೆಂದು ಭಾವಿಸಿದ ಯಾವುದೇ ಇತರ ಪ್ರಾಧಿಕಾರದಿಂದ ವರದಿಯನ್ನು ಸ್ವೀಕರಿಸಿ, ಸ್ವೀಕರಿಸಿದ ಹದಿನೈದು ದಿನಗಳೊಳಗೆ ಜಿಲ್ಲಾಧಿಕಾರಿಯವರು ಅರ್ಜಿಯ ಬಗ್ಗೆ ನಿರ್ಧರಿಸುತ್ತಾರೆ.

ಒಂದು ವೇಳೆ ಅರ್ಜಿಯು ತಿರಸ್ಕೃತಗೊಂಡಲ್ಲಿ ತಿರಸ್ಕಾರಗೊಳಿಸಿದ ಕಾರಣವನ್ನು ನಮೂದಿಸಿ

| | | |
|---|---|---|
| | | ಹಿಂಬರಹವನ್ನು ನೀಡುತ್ತಾರೆ.<br><br>ಜಿಲ್ಲಾಧಿಕಾರಿಗಳು ಅರ್ಜಿಯನ್ನು ಅಂಗೀಕರಿಸಿದಲ್ಲಿ, ಸಂದರ್ಭಾನುಸಾರ ನಿಯಮ 108ರನ್ವಯ ಭೂ ಪರಿವರ್ತನಾ ಶುಲ್ಕ ಮತ್ತು ದಂಡ (ಅನ್ವಯವಾದಲ್ಲಿ)ಗಳಿಗೆ ನೋಟಿಸ್ ನ್ನು ಜಾರಿಗೊಳಿಸುತ್ತಾರೆ. ಅರ್ಜಿದಾರರು ಪೂರ್ಣ ಶುಲ್ಕವನ್ನು ಪಾವತಿಸಿದ ನಂತರ ಡಿಜಿಟಲ್ ಸಹಿ ಮಾಡಲ್ಪಟ್ಟ ಪರಿವರ್ತನಾ ಆದೇಶ ಜಾರಿಯಾಗುತ್ತದೆ.<br><br>ಅರ್ಜಿದಾರನು ಅರ್ಜಿ ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಜಿಲ್ಲಾಧಿಕಾರಿಯವರು ಯಾವುದೇ ನಿರ್ಧಾರ ಕೈಗೊಳ್ಳದಿದ್ದಲ್ಲಿ ಸ್ವಯಂ ಚಾಲಿತ ಪರಿವರ್ತನಾ ಶುಲ್ಕ ಪಾವತಿಗಾಗಿ ತಗಾದೆ ನೋಟಿಸ್ ಜಾರಿಯಾಗುತ್ತದೆ. ಅರ್ಜಿದಾರರು ನೋಟಿಸ್ ನೀಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಪಾವತಿಯನ್ನು ಮಾಡಿದಲ್ಲಿ ಡಿಜಿಟಲ್ ಸಹಿ ಮಾಡಲ್ಪಟ್ಟ ಪರಿವರ್ತನಾ ಆದೇಶವು ಆನ್ಲೈನ್ ವ್ಯವಸ್ಥೆ ಮೂಲಕ ಸ್ವಯಂ ಚಾಲಿತವಾಗಿ ಸೃಜನೆಯಾಗಿ ಅರ್ಜಿದಾರರಿಗೆ ಜಾರಿಯಾಗುತ್ತದೆ.<br><br>ಅರ್ಜಿದಾರನು ನಿಗಧಿತ ಸಮಯದೊಳಗೆ ಭೂ ಪರಿವರ್ತನಾ ಶುಲ್ಕ ಪಾವತಿ ಮಾಡಲು ವಿಫಲವಾದರೆ, ಮೂವತ್ತು ದಿನಗಳ ಅಂತಿಮ ಅವಕಾಶ ನೀಡಲಾಗುತ್ತದೆ. ಅನಂತರ ಅದನ್ನು ಪಾಲಿಸಲು ವಿಫಲನಾದರೆ ಜಿಲ್ಲಾಧಿಕಾರಿಗಳು ಕಾರಣಗಳನ್ನು ನಮೂದಿಸಿ ಅರ್ಜಿಯನ್ನು ತಿರಸ್ಕರಿಸುತ್ತಾರೆ.<br><br>ಮುಂದುವರೆದು, 2-00 ಎಕರೆ ವರೆಗೆ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಸ್ಥಾಪನೆಗಾಗಿ ಭೂ ಪರಿವರ್ತನೆಗೆ ವಿನಾಯಿತಿ ನೀಡಲಾಗಿರುತ್ತದೆ ಮತ್ತು ನವೀಕರಿಸಬಹುದಾದ ಇಂಧನ ಯೋಜನೆಗಳಿಗೂ ಸಹಾ ಭೂ ಪರಿವರ್ತನೆ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆ. |

(ಕಡತ ಸಂಖ್ಯೆ: ಆರ್‌ಡಿ 16 ಎಲ್‌ಜಿಒ 2026)

(ಡಾ:ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

# ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುಜಾ ಕುಶಾಲಪ್ಪ, ಎಂ.ಪಿ(ಸುಜಾ) ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:42(316) ರ ಉಪಪ್ರಶ್ನೆ, ಅ) ಕ್ಕೆ ಉತ್ತರ

ಜಿಲ್ಲೆ: ಕೊಡಗು

| | | 2023-24 | | | | 2024-25 | | | | 2025-26 | | | |
|---|---|---|---|---|---|---|---|---|---|---|---|---|---|
| ಕ್ರ.ಸಂ. | ತಾಲ್ಲೂಕು | ಸಲ್ಲಿಕೆಯಾಗಿರುವ ಅರ್ಜಿಗಳು | ಸದರಿ ಅರ್ಜಿಗಳಲ್ಲಿ ಅನುಮೋದಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | ಬಾಕಿ ಅರ್ಜಿಗಳು | ಸಲ್ಲಿಕೆಯಾಗಿರುವ ಅರ್ಜಿಗಳು | ಸದರಿ ಅರ್ಜಿಗಳಲ್ಲಿ ಅನುಮೋದಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | ಬಾಕಿ ಅರ್ಜಿಗಳು | ಸಲ್ಲಿಕೆಯಾಗಿರುವ ಅರ್ಜಿಗಳು | ಸದರಿ ಅರ್ಜಿಗಳಲ್ಲಿ ಅನುಮೋದಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | ಬಾಕಿ ಅರ್ಜಿಗಳು |
| 1 | ಮಡಿಕೇರಿ | 272 | 186 | 85 | 1 | 463 | 250 | 212 | 1 | 764 | 463 | 269 | 32 |
| 2 | ಸೋಮವಾರಪೇಟೆ | 322 | 189 | 133 | 0 | 595 | 319 | 275 | 1 | 908 | 494 | 351 | 63 |
| 3 | ಕುಶಾಲನಗರ | 337 | 196 | 141 | 0 | 458 | 235 | 223 | 0 | 666 | 392 | 239 | 35 |
| 4 | ವಿರಾಜಪೇಟೆ | 187 | 80 | 107 | 0 | 319 | 132 | 186 | 1 | 497 | 245 | 222 | 30 |
| 5 | ಪೊನ್ನಂಪೇಟೆ | 354 | 228 | 126 | 0 | 545 | 280 | 264 | 1 | 960 | 561 | 339 | 60 |
| | ಒಟ್ಟು | 1472 | 879 | 592 | 1 | 2380 | 1216 | 1160 | 4 | 3795 | 2155 | 1420 | 220 |

ಜಿಲ್ಲಾಧಿಕಾರಿ ಪರವಾಗಿ
ಕೊಡಗು ಜಿಲ್ಲೆ, ಮಡಿಕೇರಿ

Scanned with OKEN Scanner